(9) ಕುಂದಾಪುರ ತಾ|| ಹಳ್ಳಿಹೊಳೆಯಲ್ಲಿ ಪ್ರೌಢಶಾಲೆ ಪ್ರಾರಂಭಿಸದ ಕುರಿತು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾ|| ಹಳ್ಳಿಹೊಳೆಗೆ ಪ್ರೌಢಶಾಲೆ ಮಂಜೂರಾಗಿದ್ದು, ಈತನಕ ಪ್ರಾರಂಭವಾಗಿಲ್ಲ. ಪ್ರಾರಂಭಿಸಬೇಕಾದವರು ಯಾರು? ಹಳ್ಳಿಹೊಳೆ ಗ್ರಾಮ ಪಂಚಾಯತಿನವರು ಪೀಠೋಪಕರಣಗಳು ಮತ್ತು ಕಟ್ಟಡವನ್ನು ವ್ಯವಸ್ಥೆ ಮಾಡಿದ್ದು, ಅಧ್ಯಾಪಕರ ನಿಯುಕ್ತಿ ಮಾಡದೇ ಈ ತನಕ ಪ್ರಾರಂಭವಾಗಿಲ್ಲ. ಆದ್ದರಿಂದ ತಕ್ಷಣ ಹಳ್ಳಿಹೊಳೆ ಪ್ರೌಢಶಾಲೆಯನ್ನು ಪ್ರಾರಂಭಿಸಬೇಕಾಗಿ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ

ಕುಂದಾಪುರ ತಾಲ್ಲೂಕು, ಹಳ್ಳಿಹೊಳೆ ಗ್ರಾಮಕ್ಕೆ ಇಲ್ಲಿಯ ತನಕ ಸರ್ಕಾರಿ ಪ್ರೌಢಶಾಲೆ ಮಂಜೂರಾಗಿಲ್ಲ. ಆದ್ದರಿಂದ ಈ ಶಾಲೆಗೆ ಉಪಾಧ್ಯಾಯರನ್ನು ನಿಯುಕ್ತಿಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸದರಿ ಹಳ್ಳಿಹೊಳೆ ಗ್ರಾಮಕ್ಕೆ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಲು ನಿರ್ದೇಶಕರು ಪ್ರೌಢಶಿಕ್ಷಣ ರವರು ತಮ್ಮ ಪತ್ರ ಸಂಖ್ಯೆ : ಆ5(5) ನೂ. ಸ.ಪ್ರೌ.ಶಾ : 22:94-95 ದಿನಾಂಕ 8.5.95ರಲ್ಲಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಬಗ್ಗೆ ಪರಿಶೀಲಿಸಲಾಗುವುದು.

(10) ಡಿಫೆನ್ಸ್ ಅಕೌಂಟ್ಸ್ ಇಲಾಖೆಯ ನೌಕರರ ಗೃಹನಿರ್ಮಾಣ ಸಂಘದ ಬಗ್ಗೆ

ಶ್ರೀ ಎನ್. ರಾಜಣ್ಣ (ಭಾರತೀನಗರ) : ಬೆಂಗಳೂರಿನಲ್ಲಿರುವ ಡಿಫೆನ್ಸ್ ಅಕೌಂಟ್ಸ್ ಇಲಾಖೆಯ ನೌಕರರ ಗೃಹನಿರ್ಮಾಣ ಸಹಕಾರ ಸಂಘದವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ 1989ರಿಂದ ಇಲ್ಲಿಯವರೆಗೆ ಸುಮಾರು 30 ಲಕ್ಷ 86 ಸಾವಿರ ರೂ.ಗಳನ್ನು ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ಹಾಗೂ ಇತರ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಠೇವಣಿಯಾಗಿ ಇಟ್ಟಿದ್ದು, ಈ ಮೇಲ್ಕಂಡ ಕೆಲಸಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೈಗೆತ್ತಿಕೊಂಡಿರುವುದಿಲ್ಲ. ಆದ್ದರಿಂದ ಸದರಿ ಗೃಹನಿರ್ಮಾಣ ಸಂಘದವರೇ ಮೇಲ್ಕಂಡ ಎಲ್ಲಾ ಕೆಲಸಗಳನ್ನು ಪೂರೈಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಇಟ್ಟಿರುವ ಠೇವಣಿ ಹಣವನ್ನು ವಾಪಸ್ಸು ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಒಪ್ಪಿಕೊಂಡಿದ್ದು ಇದುವರೆಗೆ ಸದರಿ ಸಹಕಾರ ಸಂಘಕ್ಕೆ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ಸದರಿ ಸೊಸೈಟಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಠೇವಣಿ ಇಟ್ಟಿರುವ 30 ಲಕ್ಷ 86 ಸಾವಿರ ರೂ.ಗಳನ್ನು ಸೊಸೈಟಿಗೆ ವಾಪಸ್ಸು ಮಾಡಲು ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳವರನ್ನು ಕೋರುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮೆ/ಡಿಫೆನ್ಸ್ಅಕೌಂಟ್ಸ್ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘವು ಅವರ ಬಡಾವಣೆಗೆ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುದೀಕರಣ ಮತ್ತು ಇತರೆ ನಾಗರೀಕ ಸೌಲಭ್ಯಗಳನ್ನು ಒದಗಿಸಲು ರೂ. 30,86,542-00 ಗಳನ್ನು ಕಂದಾಯ ಮಾಡಿದ್ದಾರೆ. ಈ ಕೆಲಸಗಳನ್ನು ಪ್ರಾಧಿಕಾರವು ನಿರ್ವಹಿಸದ ಕಾರಣ ಸಂಘವು ಸದರಿ ಹಣವನ್ನು ವಾಪಸ್ಸು ಮಾಡುವಂತೆ ಪ್ರಾಧಿಕಾರವನ್ನು ಕೋರಿದೆ. ಈ ಹಣದ ಪೈಕಿ ಪರಿಶೀಲನಾ ಮತ್ತು ಮೇಲ್ವಿಚಾರಣಾ ಶುಲ್ಕವಾದ ರೂ. 1,19,932-00 ಗಳನ್ನು ಹಿಂದಿರುಗಿಸಲಾಗುವುದಿಲ್ಲ. ಸಂಘವು ನಾಗರೀಕ ಸೌಲಭ್ಯ

ನಿವೇಶನಗಳ ಅಭಿವೃದ್ಧಿ ಹಾಗೂ ಪ್ರಾಧಿಕಾರಕ್ಕೆ ವಹಿಸಿಕೊಡುವುದು ಮುಂತಾದ ಕ್ರಮಗಳನ್ನು ಪೂರೈಸಿದ ನಂತರ ಮತ್ತು ಹಣದ ಅಂತಿಮ ಲೆಕ್ಕಾಚಾರದ ನಂತರ ಉಳಿದ ಹಣವನ್ನು ಸಂಘಕ್ಕೆ ಹಿಂತಿರುಗಿಸಬಹುದು.

ವಿತ್ತೀಯ ಕಾರ್ಯಕಲಾಪಗಳು

1995-96ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ

+ ಶ್ರೀ ಶೈಲಪ್ಪ ಬಿದರೂರು (ರೋಣ) : ಅಧ್ಯಕ್ಷರೇ, ನಿನ್ನೆ ದಿವಸ ಕೃಷಿ ಮತ್ತು ತೋಟಗಾರಿಕೆ ಪಶುಸಂಗೋಪನೆ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ ಅಪೂರ್ಣಗೊಂಡಿದ್ದನ್ನು. ಇವತ್ತು ನಾನು ಮುಂದುವರೆಸುತ್ತಿದ್ದೇನೆ. ತೋಟಗಾರಿಕೆ ಇಲಾಖೆ ಮೇಲಿನ post harvest system ಬಗ್ಗೆ ನಾನು ಮಾತಾನಾಡುತ್ತಿದ್ದೆ. ಅದರಲ್ಲಿ ಯಾವ ರೀತಿ ತೋಟಗಾರಿಕೆ ಬೆಳೆಗಳ ಉತ್ಪಾದನೆ ಎಷ್ಟು ಸಹನೆಯಿಂದ ರೈತ ಬೆಳೆಯುತ್ತಿದ್ದಾನೋ ಹಾಗೆ ಬೆಳೆದ ಮಾಲನ್ನು ಮಾರಾಟ ಮಾಡುವಲ್ಲಿನ ತೊಂದರೆ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ. ತೋಟಗಾರಿಕೆ ಬೆಳೆಗಳು ಒಟ್ಟು 97.75 ಲಕ್ಷ ಮೆಟ್ರಿಕ್‌ಟನ್ ಉತ್ಪಾದನೆ ರಾಜ್ಯದಲ್ಲಿರುವುದಾಗಿ ತಿಳಿದುಬರುತ್ತದೆ, ಸುಮಾರು 5 ಸಾವಿರ ಕೋಟಿ ಉತ್ಪಾದನೆ ಪ್ರತಿವರ್ಷ ಬರುತ್ತಿದೆ. ಇದರಲ್ಲಿ ಸುಮಾರು ಶೇಕಡಾ 30ರಿಂದ 40ರಷ್ಟು it is estimated that due to improper post harvest management methods 30 to 40 per cent of the horticultural produce is going waste which is valued approximately at Rs. 2000 crores per annum. ಇದು ವಿಶೇಷವಾಗಿ ಅವುಗಳನ್ನು ಕೆಡದಂತೆ ಇರುವ ವ್ಯವಸ್ಥೆ ಇರದ ಕಾರಣಗಳಿಗಾಗಿ ಈ ಒಂದು ಸಮಸ್ಯೆ ಉದ್ಭವಿಸಿದೆ. ಕೇವಲ 2 ಲಕ್ಷ ಟನ್ ತೋಟಗಾರಿಕೆ ಉತ್ಪನ್ನ ಇರುವ ಹರ್ಯಾಣ ರಾಜ್ಯದಲ್ಲಿ 139 ಶೈತ್ಯಾಗಾರಗಳಿದ್ದರೆ, 97.75 ಮೆ.ಟ. ಉತ್ಪನ್ನವಿರುವ ನಮ್ಮ ರಾಜ್ಯದಲ್ಲಿ 14 ಶೈತ್ಯಾಗಾರಗಳಿರುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಪ್ರತಿ ಜಿಲ್ಲೆಯ ಉತ್ಪನ್ನವನ್ನು ಗಣನೆಗೆ ತೆಗೆದುಕೊಂಡು ಅಲ್ಲಿ pre-cooling units ಮತ್ತು ಶೈತ್ಯಾಗಾರಗಳ ಒಂದು ಗ್ರಿಡ್‌ಗಾಗಿ ವ್ಯಾಪಕವಾದ ಸರ್ವೆಯಾಗಬೇಕು. ಅಲ್ಲಿ ತೋಟಗಾರಿಕೆ ಉತ್ಪನ್ನಗಳನ್ನು ಕೆಡದಂತೆ ಇರಲಿಕ್ಕೆ ವ್ಯವಸ್ಥೆ ಕಲ್ಪಿಸಬೇಕಾಗಿದೆ. ಒಂದು ಉದಾಹರಣೆ ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಯಾವ್ಯಾವ ಹಣ್ಣಿನ ಬೆಳೆಗಳನ್ನು pre-cooling units and cold storages ಗಳಲ್ಲಿ ಇಟ್ಟಾಗ ಅವುಗಳ ಲೈಫ್ ಹೇಗೆ ಹೆಚ್ಚಾಗುತ್ತದೆ ಎಂದರೆ ಇವತ್ತು ಈರುಳ್ಳಿ ಬೆಲೆ ಪ್ರತಿ ಸಲ it is really a gambling growing onion ಎಂದು ನನ್ನ ಅನಿಸಿಕೆ. Cold storage and pre-cooling ವ್ಯವಸ್ಥೆ ನಿರ್ಮಾಣ ಮಾಡಿದರೆ 168 ದಿವಸಗಳವರೆಗೆ ಈರುಳ್ಳಿಯನ್ನು ಕೆಡದಂತೆ ಇಡಲು ಸಾಧ್ಯವಿದೆ. ಬಾಳೆಹಣ್ಣನ್ನು 28 ದಿವಸ ಕೆಡದಂತೆ ಇಡಬಹುದು ಹೀಗೆ ಹಲವಾರು ಹಣ್ಣುಗಳ ಲೈಫನ್ನು ಹೆಚ್ಚು ಮಾಡುವ ಬಗ್ಗೆ ಶೈತ್ಯಾಗಾರಗಳ ಗ್ರಿಡ್ ಮಾಡಲು ಸರ್ಕಾರ ಒಂದು ವಿಶೇಷವಾದ ಸರ್ವೆ ಮಾಡಿ, ರಾಜ್ಯದಲ್ಲಿ ತೋಟಗಾರಿಕೆ ಬೆಳೆ ಬೆಳೆಯುವ ಪ್ರದೇಶಗಳನ್ನು ಗುರ್ತಿಸಿ ಅಲ್ಲಿ ಶೈತ್ಯಾಗಾರಗಳನ್ನು ನಿರ್ಮಿಸುವ ಕೆಲಸಕ್ಕೆ ಮುಂದಾಗಬೇಕಾಗಿದೆ. ಇನ್ನು ತೋಟಗಾರಿಕೆಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಲು, ರೈತನ ಮನೆ ಬಾಗಿಲಿಗೇ ಮುಟ್ಟಿಸುವ ಹೊಸ ಪದ್ಧತಿ ಬಗ್ಗೆ ಹೆಚ್ಚು ಒತ್ತು ಕೊಡಬೇಕಾದ ಅವಶ್ಯಕತೆ ಇದೆ. ಉತ್ತರ ಕರ್ನಾಟಕದ ಬಿಜಾಪುರ, ಧಾರವಾಡ, ಬೆಳಗಾಂ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹವಾಮಾನ ಆರ್ದ್ರತೆಯಿಂದ ಕೂಡಿದೆ. ಅಲ್ಲಿ ಹೆಚ್ಚು ತೋಟಗಾರಿಕೆ ಬೆಳೆಗೆ ಸೂಕ್ತ ಪ್ರದೇಶ ಇರುವುದರಿಂದ ಒಂದು ರಾಷ್ಟ್ರೀಯ ತೋಟಗಾರಿಕೆ ಸಂಶೋಧನಾ ಕೇಂದ್ರಕ್ಕೆ ಈ ಸರ್ಕಾರ ಕೇಂದ್ರಸರ್ಕಾರದ ಮೇಲೆ ಒತ್ತು ತರಬೇಕು. ಹೊಸ ತಂತ್ರಜ್ಞಾನವನ್ನು ರೈತನ ಮನೆಬಾಗಿಲಿಗೇ ಮುಟ್ಟಿಸಲು ಎಕ್ಸ್‌ಟೆನ್‌ಶನ್ ಪದ್ಧತಿ ಬಗ್ಗೆ